# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದಲ್ಲಿ "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011"ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ ಕೇಂದ್ರಗಳ ಕಾರ್ಯನಿರ್ವಹಕರಿಗೆ ಗೌರವಧನ ಹಾಗೂ ದೂರವಾಣಿ ಬಿಲ್‌ಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 28 ಇಕಾಅ 2012, ದಿನಾಂಕ:28/03/2012.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 119 ನಾಸೇಖಾ 2012, ದಿನಾಂಕ: 29/11/2012.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 196 ನಾಸೇಖಾ 2012, ದಿನಾಂಕ:21/8/2013

ಪ್ರಸ್ತಾವನೆ :

ಮೇಲೆ ಓದಲಾದ (1) ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು 11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಗಳನ್ನು ಕರ್ನಾಟಕ ನಾಗರೀಕರಿಗೆ ಒದಗಿಸಲು ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ಅನ್ನು ದಿನಾಂಕ:02/04/2012 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ.

ಮೇಲೆ ಓದಲಾದ (2) ರ ಅಧಿಸೂಚನೆಯಲ್ಲಿ "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ರ ಸಂಬಂಧ ಸರ್ಕಾರದ ಕ್ರಮಾಂಕ: ಸಿಆಸುಇ 119 ನಾಸೇಖಾ 2012, ದಿನಾಂಕ: 26/10/2012 ರ ಅಧಿಸೂಚನೆ-1 ರ ತಿದ್ದುಪಡಿ ಅಧಿಸೂಚನೆಯಲ್ಲಿ ಸೇರಿಸಿರುವ ಹೆಚ್ಚುವರಿ ಸೇವೆಗಳಲ್ಲಿ 6 ಇಲಾಖೆಗಳ 93 ಹೆಚ್ಚುವರಿ ಸೇವೆಗಳನ್ನು ಹಾಗೂ ಸಿಬ್ಬಂದಿ ಕಲ್ಯಾಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ 21 ಸೇವೆಗಳನ್ನು ದಿನಾಂಕ: 3ನೇ ಡಿಸೆಂಬರ್ 2012 ರಿಂದ ರಾಜ್ಯದಾದ್ಯಂತ ಜಾರಿಗೆ ಬರುವಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮುಂದುವರೆದು, "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011"ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಸರ್ಕಾರದ 44 ಇಲಾಖೆ/ಸಂಸ್ಥೆಗಳ 419 ಸೇವೆಗಳನ್ನು ಸಕಾಲದಡಿಯಲ್ಲಿ ತರಲಾಗಿದೆ.

ಮೇಲೆ ಓದಲಾದ (3) ರ ಸರ್ಕಾರದ ಆದೇಶದಲ್ಲಿ ರಾಜ್ಯದ 177 ತಾಲ್ಲೂಕು ಮತ್ತು 30 ಜಿಲ್ಲಾ ಕೇಂದ್ರಗಳಲ್ಲಿ ಸೆಪ್ಟೆಂಬರ್-2013ರಿಂದ ಅನ್ವಯವಾಗುವಂತೆ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಾಗೂ ತಾಲ್ಲೂಕು ಕಛೇರಿಯಲ್ಲಿ ಸಕಾಲ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ ಹಾಗೂ ಈ ಕೇಂದ್ರಗಳ ಕಾರ್ಯನಿರ್ವಹಕರಿಗೆ 16ನೇ ಸೆಪ್ಟೆಂಬರ್ 2013ರಿಂದ 6 ತಿಂಗಳ ಅವಧಿಗೆ ಮಾತ್ರ ಗೌರವಧನವನ್ನು ಮಂಜೂರು ಮಾಡಲಾಗುವುದು ಹಾಗೂ ಸಕಾಲ ಸಹಾಯ ಕೇಂದ್ರಗಳಿಗೆ ದೂರವಾಣಿ ಬಿಲ್‌ಗಳನ್ನು ಪ್ರತಿ ಮಾಹೆಗೆ ಬಿಲ್ ಆಧಾರದ ಮೇಲೆ ಗರಿಷ್ಟ ರೂ.1000/-ಗಳನ್ನು ಸಂಬಂಧಿಸಿದ ಅಧಿಕಾರಿಗಳ ಕಛೇರಿಗೆ ಪಾವತಿಸಲಾಗುವುದು ಎಂಬ ಮಾರ್ಗಸೂಚಿಗಳೊಂದಿಗೆ ಆದೇಶವನ್ನು ಹೊರಡಿಸಲಾಗಿದೆ.

ಮುಂದುವರೆದು, 16ನೇ ಸೆಪ್ಟೆಂಬರ್ 2013ರಿಂದ 6 ತಿಂಗಳ ಅವಧಿಗೆ ಅಂದರೆ, 2014ರ ಮಾರ್ಚ್ 15 ರವರೆಗೆ ರಾಜ್ಯದ 177 ತಾಲ್ಲೂಕು ಹಾಗೂ 30 ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿರುವ ಸಕಾಲ ಸಹಾಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಹಕರಿಗೆ ಪ್ರತಿ ತಾಲ್ಲೂಕಿಗೆ ಪ್ರತಿ ತಿಂಗಳಿಗೆ ಪ್ರತಿ ಕಾರ್ಯ ನಿರ್ವಾಹಕರಿಗೆ ರೂ.10,000/-ಗಳ ಗೌರವ ಧನ ಹಾಗೂ ಪ್ರತಿ ತಾಲ್ಲೂಕಿಗೆ ಪ್ರತಿ ತಿಂಗಳಿಗೆ ದೂರವಾಣಿ ಬಿಲ್‌ನ ಗರಿಷ್ಟ ಮೊತ್ತ ರೂ.1000/-ಗಳನ್ನು 6 ತಿಂಗಳ ಅವಧಿಗೆ ಮಂಜೂರು ಮಾಡಲು ಸರ್ಕಾರದಲ್ಲಿ ತೀರ್ಮಾನಿಸಿದೆ.

ಅದರಂತೆ ಈ ಕೆಳಕಂಡ ಆದೇಶ :-

## ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 122 ನಾಸೇಖಾ 2013, ಬೆಂಗಳೂರು, ದಿನಾಂಕ: 25ನೇ ನವೆಂಬರ್ 2013.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011" ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೆಪ್ಟೆಂಬರ್ 2013 ರಿಂದ ಅನ್ವಯವಾಗುವಂತೆ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಸ್ಥಾಪಿಸಲಾಗಿರುವ ಸಹಾಯ ಕೇಂದ್ರಗಳ ಕಾರ್ಯನಿರ್ವಹಕರಿಗೆ ಗೌರವಧನ ಹಾಗೂ

ದೂರವಾಣಿ ಬಿಲ್ ಸೇರಿದಂತೆ, ಸ್ಥಾಪಿಸಲಾಗಿರುವ ಸಹಾಯಕೇಂದ್ರಗಳ ನಿರ್ವಹಣೆಗೆ ದಿನಾಂಕ/ತಿಂಗಳುಗಳಿಗನುಗುಣವಾಗಿ – ಫೆಬ್ರವರಿ 2014 ರವರೆಗೆ ಹಾಗೂ ಸ್ಥಾಪನಾ ಪ್ರಕ್ರಿಯೆಯಲ್ಲಿರುವ ಜಿಲ್ಲೆ/ತಾಲ್ಲೂಕುಗಳಿಗೆ ಒಟ್ಟಾರೆಯಾಗಿ ರೂ.81,28,345/-(ಎಂಬತ್ತೊಂದು ಲಕ್ಷದ ಇಪ್ಪತ್ತೆಂಟು ಸಾವಿರದ ಮುನ್ನೂರ ನಲವತ್ತೈದು ರೂಪಾಯಿಗಳು ಮಾತ್ರ) ಅನುದಾನವನ್ನು ಈ ಕೆಳಕಂಡಂತೆ ಜಿಲ್ಲೆಗಳಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕುಗಳ ಸಂಖ್ಯೆ | ದೂರವಾಣಿ ಮೊತ್ತ | ಗೌರವಧನ | ಬಿಡುಗಡೆ ಮಾಡಿರುವ ಅನುದಾನದ ಮೊತ್ತ (ರೂ.ಗಳು)(ಫೆಬ್ರವರಿ 2014 ರವರೆಗೆ) |
|---|---|---|---|---|---|
| 1. | ಬಾಗಲಕೋಟೆ | 1+6 | 23,999-00 | 2,39,848-00 | 2,63,847-00 |
| 2. | ಬೆಂಗಳೂರು ನಗರ | 1+5 | 28,645-00 | 2,86,452-00 | 3,15,097-00 |
| 3. | ಬೆಂಗಳೂರು ಗ್ರಾಮಾಂತರ | 1+4 | 11,601-00 | 1,16,001-00 | 1,27,602-00 |
| 4. | ಬೆಳಗಾವಿ | 1+10 | 47,548-00 | 4,75,484-00 | 5,23,032-00 |
| 5. | ಚಾಮರಾಜನಗರ | 1+4 | 22,096-00 | 2,20,968-00 | 2,43,064-00 |
| 6. | ಚಿಕ್ಕಮಗಳೂರು | 1+7 | 20,323-00 | 2,03,226-00 | 2,23,549-00 |
| 7. | ಚಿತ್ರದುರ್ಗ | 1+6 | 21,129-00 | 2,11,290-00 | 2,32,419-00 |
| 8. | ದಾವಣಗೆರೆ | 1+6 | 31,064-00 | 3,10,646-00 | 3,41,710-00 |
| 9. | ಗದಗ | 1+5 | 23,870-00 | 2,38,711-00 | 2,62,581-00 |
| 10. | ಗುಲ್ಬರ್ಗಾ | 1+7 | 25,935-00 | 2,59,355-00 | 2,85,290-00 |
| 11. | ಹಾಸನ | 1+8 | 38,903-00 | 3,89,032-00 | 4,27,935-00 |
| 12. | ಹಾವೇರಿ | 1+7 | 23,000-00 | 2,30,000-00 | 2,53,000-00 |
| 13. | ಕೋಲಾರ | 1+5 | 21,613-00 | 2,16,129-00 | 2,37,742-00 |
| 14. | ಕೊಪ್ಪಳ | 1+4 | 21,774-00 | 2,17,742-00 | 2,39,516-00 |
| 15. | ಮಂಡ್ಯ | 1+7 | 30,000-00 | 3,00,000-00 | 3,30,000-00 |
| 16. | ಮೈಸೂರು | 1+7 | 38,192-00 | 3,81,935-00 | 4,20,127-00 |
| 17. | ರಾಯಚೂರು | 1+5 | 19,741-00 | 1,97,419-00 | 2,17,160-00 |
| 18. | ತುಮಕೂರು | 1+10 | 54,288-00 | 5,42,903-00 | 5,97,191-00 |
| 19. | ಉಡುಪಿ | 1+3 | 19,225-00 | 1,92,258-00 | 2,11,483-00 |
| | ಒಟ್ಟು | 135 | 5,22,946-00 | 52,29,399-00 | 57,52,345-00 |
| | (ಐವತ್ತೇಳು ಲಕ್ಷದ ಐವತ್ತೆರಡು ಸಾವಿರದ ಮುನ್ನೂರ ನಲವತ್ತೈದು ರೂಪಾಯಿಗಳು ಮಾತ್ರ) | | | | |
| | ಟಿಪ್ಪಣಿ: ಈ ಅನುದಾನವನ್ನು ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿರುವ ದಿನಾಂಕಗಳಿಗನುಗುಣವಾಗಿ ಹಾಗೂ ರಾಜ್ಯ ಹಾಗೂ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು ಒದಗಿಸಿರುವ ಮಾಹಿತಿಗನುಗುಣವಾಗಿ ಬಿಡುಗಡೆ ಮಾಡಿದೆ. | | | | |

ಇನ್ನೂ ಸಹಾಯ ಕೇಂದ್ರಗಳನ್ನು ತೆರೆಯುವ ಪ್ರಕ್ರಿಯೆಯಲ್ಲಿ ಇರುವ ಜಿಲ್ಲೆಗಳ ಈ ಕೆಳಕಂಡ ತಾಲ್ಲೂಕುಗಳಿಗೆ ಡಿಸೆಂಬರ್ 2013 ರಿಂದ ಫೆಬ್ರವರಿ 2014 ರವರೆಗೆ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕುಗಳ ಸಂಖ್ಯೆ | ದೂರವಾಣಿ ಮೊತ್ತ | ಗೌರವಧನ | ಬಿಡುಗಡೆ ಮಾಡಿರುವ ಅನುದಾನದ ಮೊತ್ತ (ರೂ.ಗಳು)(ಡಿಸೆಂಬರ್ 2013 ರಿಂದ ಫೆಬ್ರವರಿ 2014 ರವರೆಗೆ) |
|---|---|---|---|---|---|
| 1 | ಬಳ್ಳಾರಿ | 1+7 | 1000 | 10000 | 2,64,000-00 |
| 2 | ಬೀದರ್ | 1+5 | 1000 | 10000 | 1,98,000-00 |
| 3 | ಬಿಜಾಪುರ | 1+5 | 1000 | 10000 | 1,98,000-00 |
| 4 | ಚಿಕ್ಕಬಳ್ಳಾಪುರ | 1+6 | 1000 | 10000 | 2,31,000-00 |
| 5 | ದಕ್ಷಿಣ ಕನ್ನಡ | 1+5 | 1000 | 10000 | 1,98,000-00 |
| 6 | ಧಾರವಾಡ | 1+5 | 1000 | 10000 | 1,98,000-00 |
| 7 | ಕೊಡಗು | 1+3 | 1000 | 10000 | 1,32,000-00 |
| 8 | ರಾಮನಗರ | 1+4 | 1000 | 10000 | 1,65,000-00 |
| 9 | ಶಿವಮೊಗ್ಗ | 1+7 | 1000 | 10000 | 2,64,000-00 |
| 10 | ಉತ್ತರ ಕನ್ನಡ | 1+11 | 1000 | 10000 | 3,96,000-00 |
| 11 | ಯಾದಗಿರಿ | 1+3 | 1000 | 10000 | 1,32,000-00 |
| | ಒಟ್ಟು (ಇಪ್ಪತ್ಮೂರು ಲಕ್ಷದ ಎಪ್ಪತ್ತಾರು ಸಾವಿರ ರೂಪಾಯಿಗಳು ಮಾತ್ರ) | | | | 23,76,000-00 |

ಈ ವೆಚ್ಚವನ್ನು 2013-14ನೇ ಸಾಲಿಗೆ ಲೆಕ್ಕಶೀರ್ಷಿಕೆ "2052-00-090-0-26-051" (ಯೋಜನೇತರ) "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ರ ಅನುಷ್ಠಾನದಡಿ ಭರಿಸುವುದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 695 ವೆಚ್ಚ-12/2013, ದಿನಾಂಕ: 07/8/2013 ರ ಸಹಮತಿಯಂತೆ, ಹಾಗೂ ಆದೇಶ ಸಂಖ್ಯೆ ಆಇ 04 ಟಿಎಫ್‌ಪಿ 2012, ದಿನಾಂಕ:27/04/2012 ಹಾಗೂ ಎಫ್.ಡಿ 01 ಟಿಎಫ್‌ಪಿ 2013, ದಿನಾಂಕ: 20.04.2013ರ ಸರ್ಕಾರದ ಆದೇಶಗಳಲ್ಲಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಎನ್. ವರಪ್ರಸಾದ್ ರೆಡ್ಡಿ)
ಆಡಳಿತಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ನಾಗರೀಕ ಸೇವೆಗಳು)

B. N. VARAPRASAD REDDY
Administrative Officer
Sakala Mission
DPAR (Administrative Reforms)

ಇವರಿಗೆ:-

1. ಕರ್ನಾಟಕ ಮಹಾಲೇಖಪಾಲರು, (ಲೆಕ್ಕಪತ್ರ)/(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ ಅಂಡ್ ಆರ್), ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಹಾಗೂ ಮಿಷನ್ ನಿರ್ದೇಶಕರು, ಸಕಾಲ ಮಂಡಳಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲೆಯ ಖಜಾನಾಧಿಕಾರಿಗಳು
6. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
9. ಅಪರ ಮಿಷನ್ ನಿರ್ದೇಶಕರು, ಸಕಾಲ ಮಂಡಳಿ, ಸಿಆಸುಇ (ಆಸು), ಬಹುಮಹಡಿ ಕಟ್ಟಡ, ಬೆಂಗಳೂರು.
10. ಆಡಳಿತಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಸಕಾಲ ಮಂಡಳಿ, ಸಿಆಸುಇ (ಆಸು), ಬೆಂಗಳೂರು.
11. ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸುಇ (ಆಸು) ರವರ ಆಪ್ತ ಸಹಾಯಕರು
12. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.